ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 08.06.2023.

**<u>ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ವಕೀಲರಿಂದಃ</u>**

1. 3 ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರದ ಸಂಗತಿಗಳು ನನಗೆ ಗೊತ್ತಿರುತ್ತವೆ.

ನನ್ನ ಮಾರಾಟಗಾರರಾದ ಗುರುನಾಥ ಜ್ಯೋಶಿ ರವರು ಹಿಂದೆ

ಒಎಸ್.ನಂ.29/2000 ಅಂತ ಮುನಿಸಿಪಾರ್ಟಿ ರವರ ವಿರುದ್ಧ ಹಾಗೂ ಕಾರ್ಯದರ್ಶಿ ಜಿಲ್ಲಾ ಪಂಚಾಯತಿ ಮತ್ತು ಅರಣ್ಯ ಇಲಾಖೆಯ ಹಾಗೂ ಜಿಲ್ಲಾಧಿಕಾರಿಗಳ ವಿರುದ್ಧ ದಾವಾ ಸ್ವತ್ತಿನ ಕುರಿತು ಘೋಷಣಾ ದಾವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲಾ. ಸದರಿ ಮೇಲೆ ಹೇಳಿದ ದಾವೆಯಲ್ಲಿ ನನ್ನ ಮಾರಾಟಗಾರರು ಹಾಕಿದ ಕೇಸ್ ಏನಾಯಿತು ಎಂದು ನಾನು ಚೌಕಾಶಿ ಮಾಡಿಲ್ಲಾಹಾಗೂ ಸದರಿ ದಾವೆಯ ದಾಖಲೆಗಳನ್ನು ಪರಿಶಿಲಿಸಿಲ್ಲಾ.

2. ನಾನು ಕ್ರಯ ಪತ್ರದಲ್ಲಿ ಅಂದರೆ ನಿಪಿ-5 ರಲ್ಲಿ ತೋರಿಸಿದ ಚೆಕ್‌ಬಂದಿಯಲ್ಲಿರುವ ಸ್ವತ್ತನ್ನು ಖರೀದಿಸಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ತೋರಿಸಿರುವ ಚೆಕ್‌ಬಂದಿಯಲ್ಲಿ ಪ್ರತಿವಾದಿಗಳು ಯಾರೂ ಇರುವುದಿಲ್ಲ ಎಂದರೆ ಸರಿ. ನಿಪಿ-5 ರಲ್ಲಿ ತೋರಿಸಿರುವ ಚೆಕ್‌ಬಂದಿಯಲ್ಲಿರುವ ಮಾಲಿಕರು ಇರುತ್ತಾರೆ ಎಂದು ತೋರಿಸಲು ಬೇರೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ. ನಿಪಿ-5 ರಲ್ಲಿರುವ ಚೆಕ್‌ಬಂದಿಯಲ್ಲಿ ತೋರಿಸಿರುವ ಪಕ್ಕದ ಹೊಲದವರು ಅವರೇ ಇರುತ್ತಾರೆ ಎಂದು ತೋರಿಸಲು ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲಾ.

3. ಸರ್ವೆ ನಂ.220/2 ರಲ್ಲಿ ರಾಜ್ಯಪಾಲರು ಕರ್ನಾಟಕ ಸರ್ಕಾರ ಪರವಾಗಿ ಟಿಎಂಸಿ ಆಳಂದ ರವರ ಹೆಸರಿನಲ್ಲಿ 2 ಎಕರೆ 30 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲಾ. ಸರ್ವೆ ನಂ.220/3 ರಲ್ಲಿ ಕಾರ್ಯನಿರ್ವಹಕ ಅಭಿಯಂತರರು ನೀರು ಸರಬರಾಜು-ಒಳಚರಂಡಿ ಕಲಬುರಗಿ ರವರ ಹೆಸರಿನಲ್ಲಿ 5 ಎಕರೆ 30 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲಾ. ಸರ್ವೆ ನಂ.220/5 ರಲ್ಲಿ ರಾಜ್ಯಪಾಲರು ಕರ್ನಾಟಕ ಸರ್ಕಾರ ಪರವಾಗಿ ಟಿಎಂಸಿ ಆಳಂದ ರವರ ಹೆಸರಿನಲ್ಲಿ 2 ಎಕರೆ 10 ಗುಂಟೆ ಜಮೀನು ಇದೆ ಎಂದರೆ

ನನಗೆ ಗೊತ್ತಿಲ್ಲಾ. ಮೇಲೆ ಹೇಳಿದ ಹೆಸರಿನಲ್ಲಿ ಹೇಗೆ ಪಹಣಿಗಳು ಬಂದಿರುತ್ತವೆ ಎಂದು ನಾನುಚೌಕಾಶಿ ಮಾಡಿಲ್ಲಾ, ನನ್ನದು ಮಾತ್ರ ನೋಡಿರುತ್ತೇನೆ.

4. ಮೇಲೆ ಹೇಳಿದವರ ಹೆಸರಿನಲ್ಲಿ ಯಾವ ರೀತಿ ಪಹಣಗಳು ಬಂದಿರುತ್ತವೆ ಎಂದು ನಾನು ಸಂಬಂಧಪಟ್ಟ ಇಲಾಖೆಯಿಂದ ದಾಖಲೆಗಳನ್ನು ಪಡೆದುಕೊಂಡಿಲ್ಲಾ. ಮೇಲೆ ಹೇಳಿದವರು ಜಮೀನುಗಳಲ್ಲಿ ಯಾವ ರೀತಿ ಮಾಲಿಕರು ಮತ್ತು ಕಬ್ಜೆದಾರರು ಇರುತ್ತಾರೆ ಎಂದು ನಾನು ಸಂಬಂಧಪಟ್ಟ ಇಲಾಖೆ ರವರಿಗೆ ಚೌಕಾಶಿ ಮಾಡಿಲ್ಲಾ. ನನ್ನ ಮಾರಾಟಗಾರರಾದ ಗುರುನಾಥ ಜ್ಯೋತಿ ರವರು ಎಲ್ಲಾ ಪ್ರತಿವಾದಿಯವರ ವಿರುದ್ಧ ಸಲ್ಲಿಸಿದ ಓಎಸ್.ನಂ.29/2000 ದಾವೆಯಲ್ಲಿ ಮಧ್ಯಂತರ ಅರ್ಜಿ ವಜಾಯಾಗಿದೆ ಎಂದರೆ ನನಗೆ ಗೊತ್ತಿಲ್ಲಾ. ದಿಃ 28.09.2004 ರಲ್ಲಿ ಮೇಲೆ ಹೇಳಿದ ವಾದಿ ಬರದೆ ಇರುವ ಕಾರಣ ದಾವೆ ವಜಾಯಾಗಿದೆ ಎಂದರೆ ನನಗೆ ಗೊತ್ತಿಲ್ಲಾ.

5. ಪ್ರತಿವಾದಿಯವರು ತೆಗೆದುಕೊಂಡ ನಿಲುವಿನ ಪ್ರಕಾರ ಮೇಲೆ ಹೇಳಿದ ದಾವೆ ವಜಾಯಾಗಿದೆಯೇ ಇಲ್ಲವೋ ಎಂಬುವುದರ ಬಗ್ಗೆ ನಾನು ನಮ್ಮ ಮಾರಾಟಗಾರರಾದ ಗುರುನಾಥ ಜ್ಯೋತಿ ರವರು ಕುರಿತು ವಿಚಾರ ಮಾಡಿಲ್ಲಾ. ಸರ್ವೆ ನಂ.220 ರಲ್ಲಿ 2 ನೇ ಪ್ರತಿವಾದಿಯವರು ಕಟ್ಟಿದ ಕಛೇರಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲಾ, ಆದರೆ ನಮ್ಮ ಜಮೀನಿನಲ್ಲಿ ಇಲ್ಲಾ ಎಂದು ನುಡಿದಿರುತ್ತಾರೆ. ನಾನು ಸ್ವತಃ ಹೋಗಿ 2 ನೇ ಪ್ರತಿವಾದಿಯವರ ಕಛೇರಿ ಇದೆಯೋ ಇಲ್ಲವೋ ಎಂದು ನೋಡಿರುವುದಿಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**